ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 29/11/19

# ತ್ರಿಮುಖಿ ಸರ್ಕಾರ ಪಟ್ಟಾಭಿಷೇಕ



## ಅಜಿತ್ ಪವಾರ್‌ಗೆ ಸಿಗದ ಸಚಿವ ಸ್ಥಾನ



ನೂತನ ಸಿಎಂ ಆಗಿರುವ ಉದ್ಧವ್ ಠಾಕ್ರೆ ಅವರಿಗೆ ಪ್ರಧಾನಿ ನರೇಂದ್ರಮೋದಿ ಅಭಿನಂದಿಸಿದ್ದು, ಶುಭಾಶಯ ಕೋರಿದ್ದಾರೆ. ಮಹಾರಾಷ್ಟ್ರದ ಅಭಿವೃದ್ಧಿಗೆ ಸರ್ಕಾರ ಕಂಕಣಬದ್ಧವಾಗಿರಲಿ ಎಂದು ಹಾರೈಸಿದ್ದಾರೆ

ಮುಂಬೈ: ಮಹಾರಾಷ್ಟ್ರ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಶಿವಸೇನೆ ಮುಖ್ಯಸ್ಥ ಉದ್ಧವ್ ಠಾಕ್ರೆ ಗುರುವಾರ ಪ್ರಮಾಣವಚನ ಸ್ವೀಕರಿಸುವ ಮೂಲಕ ತ್ರಿಪಕ್ಷಗಳ ಮೈತ್ರಿಯ ಹೊಸ ಸರ್ಕಾರ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ಸಂಪುಟಕ್ಕೆ 6 ಮಂದಿ ಸಚಿವರನ್ನು ಸೇರಿಸಿಕೊಳ್ಳಲಾಗಿದ್ದು ರಾಜ್ಯಪಾಲ ಭಗತ್‌ಸಿಂಗ್ ಕೊಶ್ಯಾರಿ ಎಲ್ಲರಿಗೂ ಪ್ರತಿಜ್ಞಾವಿಧಿ ಬೋಧಿಸಿದರು.

ಎಲ್ಲ ರಾಜಕೀಯ ಗೊಂದಲದ ಬಳಿಕ ಮಹಾರಾಷ್ಟ್ರ ವಿಕಾಸ ಆಘಾಡೀಯಡಿ ಒಗ್ಗೂಡಿದ್ದ ಶಿವಸೇನೆ, ಎನ್‌ಸಿಪಿ ಹಾಗೂ ಕಾಂಗ್ರೆಸ್ ಅಗತ್ಯ ಸಂಖ್ಯಾಬಲದೊಂದಿಗೆ ಸರ್ಕಾರ ರಚಿಸಿವೆ. ಮುಂಬೈ ಮಹಾನಗರದ ಶಿವಾಜಿಪಾರ್ಕ್‌ನಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ, ಸಹಸ್ರಾರು ಅಭಿಮಾನಿಗಳು, ಕಾರ್ಯಕರ್ತರ ಸಮ್ಮುಖದಲ್ಲಿ ಠಾಕ್ರೆ ಕುಟುಂಬದಿಂದ ಇದೇ ಮೊದಲ ಬಾರಿಗೆ ಉನ್ನತ ಹುದ್ದೆ ಅಲಂಕರಿಸಿದ ಉದ್ಧವ್‌ಠಾಕ್ರೆ ವೇದಿಕೆಯಲ್ಲಿ ಶಿವಾಜಿ ಮಹಾರಾಜ್ ಪುತ್ಥಳಿಗೆ ನಮಸ್ಕರಿಸಿ ಶಿವಾಜಿ ಮತ್ತು ಈಶ್ವರನ ಹೆಸರಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಉದ್ಧವ್ ಶಾಸಕರಲ್ಲದೆ ಮಹಾರಾಷ್ಟ್ರದ ಸಿಎಂ ಹುದ್ದೆಗೇರಿದ 8ನೇ ವ್ಯಕ್ತಿ ಎನಿಸಿದ್ದಾರೆ.

ಉದ್ಧವ್ ಪ್ರತಿಜ್ಞಾವಿಧಿ ಸ್ವೀಕರಿಸಿಲು ವೇದಿಕೆ ಏರುತ್ತಿದ್ದಂತೆ ಸೇನಾ ಅಭಿಮಾನಿಗಳು 'ಶಿವಾಜಿ ಮಹಾರಾಜ್ ಕಿ ಜೈ' ಬಾಳಾಠಾಕ್ರೆ ಕಿ ಜೈ' ಎಂಬ ಘೋಷಣೆ ಮುಗಿಲು ಮುಟ್ಟಿದವು. ಬಳಿಕ ಶಿವಸೇನೆಯ ಶಾಸಕಾಂಗ ನಾಯಕ ಏಕನಾಥ್ ಅಂಬಾಜಿ ಶಿಂಧೆ ಹಾಗೂ ಸುಭಾಷ್ ರಾಜಾರಾಂ ದೇಸಾಯಿ ಶಿವಾಜಿ ಹಾಗೂ ಠಾಕ್ರೆ ಹೆಸರಿನಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಆನಂತರ ಎನ್‌ಸಿಪಿಪಕ್ಷದ ಹಿರಿಯ ನಾಯಕ ಜಯಂತ್ ಪಾಟೀಲ್ ಹಾಗು ಛಗನ್ ಭುಜ್‌ಬಲ್, ಕಾಂಗ್ರೆಸ್‌ನಿಂದ ಪಕ್ಷದ ರಾಜ್ಯಾಧ್ಯಕ್ಷ ಬಾಳಾಸಾಹೇಬ್ ಥೋರಟ್ ಹಾಗು ಪರಿಶಿಷ್ಟಜಾತಿ ಮುಖಂಡ ನಿತಿನ್ ರಾವುತ್ ರಾಜ್ಯಪಾಲರಿಂದ ಅಧಿಕಾರ ಮತ್ತು ಗೌಪ್ಯತೆಯ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಸಚಿವರಾಗುವ ಪಟ್ಟಿಯಲ್ಲಿದ್ದ ಮಾಜಿ ಸಿಎಂ ಅಶೋಕ್ ಚೌಹಾಣ್ ಅವರ ಹೆಸರನ್ನು ಕೊನೆಕ್ಷಣದಲ್ಲಿ ಕೈಬಿಟ್ಟದ್ದು ವಿಶೇಷವಾಗಿತ್ತು. ಪಕ್ಷದಿಂದ ಹೊರಹೋಗಿದ್ದ ಅಜಿತ್‌ಪವಾರ್ ಸಚಿವರಾಗುವ ನಿರೀಕ್ಷೆ ಇತ್ತಾದರೂ ಮೊದಲ ಹಂತದಲ್ಲಿ ಸ್ಥಾನವಾಗಿಲ್ಲ.

ಸಮಾರಂಭದಲ್ಲಿ ಮಾಜಿ ಸಿಎಂ ದೇವೇಂದ್ರ ಫಡ್ನವಿಸ್, ಡಿಎಂಕೆ ಮುಖ್ಯಸ್ಥ ಸ್ಟಾಲಿನ್, ಮಧ್ಯಪ್ರದೇಶ ಸಿಎಂ ಕಮಲ್‌ನಾಥ್, ಕಾಂಗ್ರೆಸ್ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ಆಹ್ಮದ್‌ಪಟೇಲ್, ವೇಣುಗೋಪಾಲ್, ಎನ್‌ಸಿಪಿ ಮುಖ್ಯಸ್ಥ ಶರದ್‌ಪವಾರ್, ಹಿರಿಯ ವಕೀಲ ಕಪಿಲ್‌ಸಿಬಲ್, ಉದ್ಯಮಿ ಮುಖೇಶ್ ಅಂಬಾನಿ, ರಾಜ್ ಠಾಕ್ರೆ ಮೊದಲಾದವರು ಹಾಜರಿದ್ದರು.

1. ಮಹಾರಾಷ್ಟ್ರ ವಿಕಾಸ ಆಘಾಡಿ ಸರ್ಕಾರ
2. ಶಿವಸೇನೆ-ಎನ್‌ಸಿಪಿ-ಕಾಂಗ್ರೆಸ್ ಮೈತ್ರಿ
3. ಉದ್ಧವ್ ಠಾಕ್ರೆ ನೂತನ ಮಹಾ ಸಿಎಂ
4. ಶಾಸಕರಲ್ಲದ ಎಂಟನೇ ಮುಖ್ಯಮಂತ್ರಿ
5. ಶಿವಾಜಿ ಹೆಸರಲ್ಲಿ ಪ್ರತಿಜ್ಞಾವಿಧಿ ಸ್ವೀಕಾರ
6. ಸಚಿವರಾಗಿ 6 ಮಂದಿ ಪ್ರಮಾಣ ವಚನ
7. ಶಿವಾಜಿ ಪಾರ್ಕ್‌ನಲ್ಲಿ ನೆರೆದ ಜನಸಾಗರ